ಸೋಲಿಸಬೇಕೆಂದರೆ ಇಂಥ 4 ತೆಗೆದುಕೊಂಡರೆ ಸಾಕು. ಒಂದು ಕ್ಷೇತ್ರದಲ್ಲಿ borewell ಬೇಕೆಂದು 400–500 ಜನ applications ಹಾಕುತ್ತಾರೆ. ಅದಕ್ಕೆ ಎಷ್ಟು influence ಗೊತ್ತೇ? ನೀವು ಇಷ್ಟು ಕೊಡದೇ ಹೋದರೆ ನಾನು ಮುನಿಸಿಕೊಂಡು ಬೇರೆ ಪಾರ್ಟಿಗೆ ಹೋಗುತ್ತೇನೆಂದು ಹೇಳುತ್ತಾರೆ. ಆ 10 borewell ಗಳನ್ನು ಹಂಚುವ ಹೊತ್ತಿಗೆ ಸಾಕಾಗಿ ಹೋಗಿರುತ್ತದೆ. ಅದರ ಆಯ್ಕೆಗೆ ಶಾಸಕರನ್ನೇ ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಅದಕ್ಕೆ ಬೇರೆಯವರನ್ನು ಯಾರನ್ನಾದರೂ ಅಧ್ಯಕ್ಷರನ್ನಾಗಿ ಮಾಡಿದ್ದರೆ ನಾವು ತಪ್ಪಿಸಿಕೊಳ್ಳಬಹುದಾಗಿತ್ತು.

**ಶ್ರೀ ಎನ್. ಸಂಪಂಗಿ:** ಅದರಲ್ಲಿ ಬಿ.ಸಿ.ಎಂ.–ಬಿ ಗ್ರೂಪ್‌ಗೆ ಇಲ್ಲ. ಬಿಸಿಎಂ–ಎ ಗೆ ಮಾತ್ರ ಇದೆ.

**ಶ್ರೀ ಕೆ.ಎಂ. ಶಿವಲಿಂಗೇಗೌಡ:** ಹಾಗಾಗಿ ಇನ್ನೂ 50 borewell ಗಳನ್ನು ಾಡಿ. SC/ST ಇವರಿಗೆಲ್ಲ ಏನು ಉತ್ತೇಜನ ಕೊಡುತ್ತಿದ್ದೀರಿ ಅದೇ ರೀತಿ ಿಸಿ ಮಾಡಿ. ಆಗ ಎಂಎಲ್‌ಎಗಳಿಗೆ ಘನತೆ ಗೌರವ ಬರುತ್ತದೆ. ಇಷ್ಟು ಶ್ಟು ಮಾತನಾಡಲು ನನಗೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ತುಗಳನ್ನು ಮುಗಿಸುತ್ತೇನೆ.

**ಅಧ್ಯಕ್ಷರು:** ಈಗ ಮಾನ್ಯ ಮುಖ್ಯಮಂತ್ರಿಯವರಿಂದ ದಿನಾಂಕ: 11, 12 ತ್ತು 13 ರ ಮಾರ್ಚ್ 2011ರಂದು ಬೆಳಗಾವಿಯಲ್ಲಿ ನಡೆಯಲಿರುವ 2ನೇ ಶ್ವ ಕನ್ನಡ ಸಮ್ಮೇಳನದ ಬಗ್ಗೆ statement ಮಾಡುತ್ತಾರೆ.

**2) ಮುಖ್ಯಮಂತ್ರಿಗಳ ಹೇಳಿಕೆ**

**ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು):**

- 2011ರ ಮಾರ್ಚ್ 11, 12 ಮತ್ತು 13ರಂದು 2ನೇ ವಿಶ್ವ ಕನ್ನಡ ಸಮ್ಮೇಳನವನ್ನು ಅದ್ದೂರಿಯಾಗಿ ಬೆಳಗಾವಿಯಲ್ಲಿ ಆಚರಿಸಲು ನಿರ್ಧರಿಸಲಾಗಿದೆ.
- ವಿಶ್ವಕನ್ನಡ ಸಮ್ಮೇಳನ ಆಚರಿಸುವ ಸಲುವಾಗಿ 15 ಸಮಿತಿಗಳನ್ನು ವಿವಿಧ ಕೆಲಸ ಕಾರ್ಯಗಳ ನಿರ್ವಹಣೆಗಾಗಿ ರಚಿಸಲಾಗಿದೆ. ಹಾಗೂ ಸಮ್ಮೇಳನದ ಸಿದ್ಧತೆಯು ಭರದಿಂದ ಸಾಗಿದ್ದು, ರಾಜ್ಯ, ರಾಷ್ಟ್ರದ ಹಾಗೂ ವಿದೇಶದಲ್ಲಿರುವ ಕನ್ನಡಿಗರು ಪಾಲ್ಗೊಳ್ಳಲ್ಲಿದ್ದಾರೆ.
- ದಿನಾಂಕ 11–3–2011ರಂದು ಉದ್ಘಾಟನಾ ಸಮಾರಂಭವನ್ನು ರಾಣಿ ಚೆನ್ನಮ್ಮ ವೇದಿಕೆಯಲ್ಲಿ ಹಮ್ಮಿಕೊಳ್ಳಲಾಗಿದ್ದು, ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಮ್ಮೇಳನದ ಉದ್ಘಾಟನೆಯನ್ನು ಶ್ರೀ ಎನ್.ಆರ್.

ನಾರಾಯಣಮೂರ್ತಿ, ಅಧ್ಯಕ್ಷರು ಮತ್ತು ಪ್ರಧಾನ ಮಾರ್ಗದರ್ಶಕರು, ಇನ್ಫೋಸಿಸ್ ಇವರು ನೆರವೇರಿಸಲಿದ್ದಾರೆ.

- ಅಂದೇ ಡಾ: ಜಿ.ಎಸ್. ಶಿವರುದ್ರಪ್ಪ, ರಾಷ್ಟ್ರಕವಿಗಳು 100 ಮೇರು ಕೃತಿಗಳನ್ನು ಬಿಡುಗಡೆ ಮಾಡಲಿದ್ದು, ಜ್ಞಾನ ಪೀಠ ಪ್ರಶಸ್ತಿ ವಿಜೇತರಾದ ಡಾ: ಯು.ಆರ್. ಅನಂತಮೂರ್ತಿ ಇವರು 'ಪುನರಾವಲೋಕನ' ಸಂದರ್ಭ ಗ್ರಂಥ ಬಿಡುಗಡೆ ಮಾಡಲಿದ್ದಾರೆ.
- ಅಂದು ರಂಗಭೂಮಿ ಕಲಾವಿದರು, ಹಿರಿಯ ಕವಿಗಳು, ಚಲನಚಿತ್ರ ಕಲಾವಿದರು, ಕ್ರಿಕೆಟ್ ಪಟುಗಳು, ಸರ್ವೋಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಾಧೀಶರು ಹಾಗೂ ಹಿರಿಯ ರಾಜಕಾರಣಿಗಳು ಭಾಗವಹಿಸಲಿದ್ದಾರೆ.
- ಕಾರ್ಯಕ್ರಮವು 3 ದಿನಗಳ ಕಾಲ ನಡೆಯಲಿದ್ದು, ಪ್ರಧಾನ ವೇದಿಕೆಯಲ್ಲದೆ ಉಳಿದಂತೆ ಸುಮಾರು 15 ವೇದಿಕೆಗಳಲ್ಲಿ ಸತತ ಮೂರು ದಿನಗಳ ಕಾಲವೂ ಸಾಂಸ್ಕೃತಿಕ, ಜಾನಪದ, ಕವಿಗೋಷ್ಠಿ, ಸಂಗೀತ, ನೃತ್ಯ, ವಸ್ತುಪ್ರದರ್ಶನ ನಾಟಕ, ಚಿತ್ರಕಲಾ ಶಿಬಿರ, ಶಿಲಾ ಶಿಬಿರ, ಮರಕೆತ್ತನೆ ಶಿಬಿರ, ಕವಿಗೋಷ್ಠಿಗಳು ನಡೆಯಲಿವೆ.
- ಅದಲ್ಲದೇ ಕಲೆ ಸಂಸ್ಕೃತಿಯಿಂದ ಪ್ರಾರಂಭವಾಗಿ ಸಮಕಾಲೀನ ಜಗತ್ತು ಮತ್ತು ಮಹಿಳೆ, ಹೊರನಾಡು ಮತ್ತು ಹೊರದೇಶ ಕನ್ನಡಿಗರು, ಜಾಗತೀಕರಣ ಕರ್ನಾಟಕ, ನುಡಿಗೆ ಚಿತ್ರ, ಮಕ್ಕಳ ಮಾತು, ಗಡಿನಾಡ ಕನ್ನಡಿಗರು, ಜ್ಞಾನ–ವಿಜ್ಞಾನ–ತಂತ್ರಜ್ಞಾನ, ಕೃಷಿ ಸಾಧನೆ, ಸಮೂಹ ಮಾಧ್ಯಮ, ಕನಸಿನ ಕರ್ನಾಟಕ, ದೇಸಿ ಚಿಂತನೆ, ಭಾಷಾ ಬಳಕೆ, ದಲಿತ ಸಂಸ್ಕೃತಿಯ ಅನನ್ಯತೆ, ಬೆಳಗಾವಿಯಲ್ಲಿ ಕನ್ನಡದ ಉಳಿವು ಮುಂತಾದ ಎಲ್ಲಾ ವಿಷಯಗಳ ಬಗ್ಗೆ ವಿಚಾರಗೋಷ್ಠಿಗಳನ್ನು ಏರ್ಪಡಿಸಲಾಗಿದೆ.
- ಬೆಳಗಾವಿ ಜಿಲ್ಲೆಯ 3000 ಕಲಾವಿದರು ಹಿರಿಯ ಕವಿಗಳ 5 ಗೀತೆಗಳಿಗೆ ನೃತ್ಯ ರೂಪಕ ಕಾರ್ಯಕ್ರಮವನ್ನು ನೀಡಲಿದ್ದಾರೆ. ಅಂತೆಯೇ 1100 ಜನಪದ ಕಲಾವಿದರು ಜನಪದ ಝೇಂಕಾರ ಗೀತೆಗೆ ನೃತ್ಯ ಮಾಡಲಿದ್ದಾರೆ. 500 ಜನ ಬೆಳಗಾವಿ ಗಾಯಕರು ನಾಡಗೀತೆ ಹಾಡಲಿದ್ದಾರೆ.

- ಕರ್ನಾಟಕದ ಸರ್ವಾಂಗೀಣ ಪ್ರಗತಿಯನ್ನು ಪ್ರತಿಬಿಂಬಿಸುವ ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗಿದ್ದು, ಪುಸ್ತಕ ಪ್ರದರ್ಶನ ಜಾನಪದ, ಶಿಲ್ಪಕಲೆ, ಕನ್ನಡ ಚಲನಚಿತ್ರ ನಡೆದು ಬಂದ ದಾರಿ, ಕೃಷಿ ಮತ್ತು ತೋಟಗಾರಿಕೆ, ವಿಜ್ಞಾನ ವೈವಿಧ್ಯತೆ, ಐತಿಹಾಸಿಕ ದಾಖಲೆಗಳು, ಕೈಗಾರಿಕೆ, ಪ್ರವಾಸೋದ್ಯಮ, ಐ.ಟಿ.ಬಿ.ಟಿ. ಸಾಧನೆ, ಕ್ರೀಡೆ, ಕರ್ನಾಟಕದ ಕಲೆ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುವ ವೈಶಿಷ್ಟ್ಯ ಪೂರ್ಣ ವಸ್ತು ಪ್ರದರ್ಶನ ಏರ್ಪಡಿಸಲಾಗಿದೆ.
- ಸಾರ್ವಜನಿಕರು ಈ ಐತಿಹಾಸಿಕ ಸಮ್ಮೇಳನದಲ್ಲಿ ಭಾಗವಹಿಸಲು ಅನುವಾಗುವಂತೆ ವಿಶೇಷ ಬಸ್ಸು, ರೈಲುಗಳ ವ್ಯವಸ್ಥೆಯನ್ನು ಮಾಡಲಾಗಿದೆ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸುವ ಎಲ್ಲಾ ಪ್ರತಿನಿಧಿಗಳಿಗೆ ಸಾರಿಗೆ, ಊಟ, ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.
- ಈ ಐತಿಹಾಸಿಕ ಸಮ್ಮೇಳನದಲ್ಲಿ ತಾವೆಲ್ಲರು ಭಾಗವಹಿಸುವಂತೆ ಕೋರುತ್ತೇನೆ.

ನಾನು ನಮ್ಮ ಶಾಸಕ ಮಿತ್ರರಲ್ಲಿ ವಿನಂತಿ ಮಾಡುತ್ತೇನೆ. ದಯಮಾಡಿ ತಾವುಗಳು ಮುಂಚೆ ತಿಳಿಸಿದರೆ ತಮಗೆ ವಾಸ್ತವ್ಯದ ವ್ಯವಸ್ಥೆ ಮಾಡಲಾಗುತ್ತದೆ. ದಯಮಾಡಿ ನಮ್ಮ ಎಲ್ಲಾ ಶಾಸಕ ಮಿತರು, ವಿಧಾನ ಸಭೆ, ವಿಧಾನ ಪರಿಷತ್ತು, ಸಂಸತ್ತು ಸದಸ್ಯರು, ಈ ಐತಿಹಾಸಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿ ಮಾಡಿಕೊಡಬೇಕೆಂದು ಅತ್ಯಂತ ವಿನಯದಿಂದ ನಾನು ತಮ್ಮೆಲ್ಲರನ್ನು ವಿನಂತಿ ಮಾಡುತ್ತಿದ್ದೇನೆ.

**ಶ್ರೀ ನೆ.ಲ. ನರೇಂದ್ರ ಬಾಬು:** ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿದೋ ತಿಳಿಯದೋ ಆಮಂತ್ರಣ ಪತ್ರಿಕೆಯಲ್ಲಿ ಒಂದು ಅಂಶ ಬಿಟ್ಟು ಹೋಗಿರುವುದನ್ನು ಅವರ ಗಮನಕ್ಕೆ ತರುತ್ತೇನೆ.

**ಅಧ್ಯಕ್ಷರು:** ಹೇಳಿಕೆಯ ಮೇಲೆ ಚರ್ಚೆಗೆ ಅವಕಾಶವಿಲ್ಲ. ಮಾನ್ಯ ಶ್ರೀನಿವಾಸ್ ಪ್ರಸಾದ್‌ರವರು ತಾವು ಮಾತನಾಡಿ.

**ಶ್ರೀ ನೆ.ಲ. ನರೇಂದ್ರ ಬಾಬು :** ಮಾನ್ಯ ಅಧ್ಯಕ್ಷರೆ, ಬೆಳಗಾವಿ ಮಹಾಪೌರರಾದ ನಿರ್ವಾಣಿಯವರ ಹೆಸರು ಬಿಟ್ಟು ಹೋಗಿದೆ, ಮುಖ್ಯಮಂತ್ರಿ ಚಂದ್ರುರವರ ಹೆಸರು ಬಿಟ್ಟು ಹೋಗಿದೆ. ಸ್ಥಳೀಯ ಶಾಸಕರ ಮತ್ತು

ಸಂಸದರ ಹೆಸರು ಬಿಟ್ಟು ಹೋಗಿದೆ. ದಯವಿಟ್ಟು ಅಭಾಸವಾಗದ ರೀತಿಯಲ್ಲಿ ಇದನ್ನು ಸರಿಪಡಿಸಬೇಕೆನ್ನುವ ವಿನಂತಿ ಮಾಡುತೇನೆ.

**ಅಧ್ಯಕ್ಷರು :** ಸೂಚನೆ ಕೊಡುತ್ತೇನೆ.

### 3) ವಿತ್ತೀಯ ಕಾರ್ಯಕಲಾಪ

2011–12ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ (ಮುಂದು)

**ಶ್ರೀ ವಿ.ಶ್ರೀನಿವಾಸ್ ಪ್ರಸಾದ್ (ನಂಜನಗೂಡು):** ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಯವರು 2011–12ನೇ ಸಾಲಿನ ಬಜೆಟ್‌ನ್ನು ಮಂಡಿಸಿದ್ದಾರೆ. ಅವರು ಉಪ ಮುಖ್ಯಮಂತ್ರಿ ಯಾಗಿದ್ದಾಗಲೂ ಅವರ ಹತ್ತಿರ ಹಣಕಾಸಿನ ಖಾತೆ ಇತ್ತು ಆಗ ಅವರು ಎರಡು ಬಾರಿ ಬಜೆಟ್‌ನ್ನು ಮಂಡಿಸಿದ್ದಾರೆ. ಮುಖ್ಯಂತ್ರಿಗಳಾದ ಮೇಲೂ ಹಣಕಾಸಿನ ಖಾತೆ ಅವರ ಹತ್ತಿರ ಇದೆ, ತಾವು ಈಗ ನಾಲ್ಕನೆ ಬಾರಿಗೆ ಈ ಬಜೆಟ್‌ನ್ನು ಮಂಡಿಸಿದ್ದೀರಿ. ಉಪ ಮುಖ್ಯಮಂತ್ರಿಗಳಾಗಿ ಎರಡು ಸಲ, ಮುಖ್ಯಮಂತ್ರಿಗಳಾಗಿ ನಾಲ್ಕು ಸಲ, ಒಟ್ಟು ಆರು ಬಜೆಟ್‌ನ್ನು ಮಂಡಿಸಿದ್ದಾರೆ. ಹಣಕಾಸಿನ ಖಾತೆ ಅವರ ಹತ್ತಿರ ಇದ್ದಿದ್ದರಿಂದ ಅವರು ಆರು ಸಾರಿ ಬಜೆಟ್ ಮಂಡಿಸಲಿಕ್ಕೆ ಅವಕಾಶ ಸಿಕ್ಕಿದೆ ಎನ್ನುವುದಕ್ಕೆ ಅವರು ಬಹಳ ಹೆಮ್ಮೆ ಪಡುತ್ತಾರೆ. ಈ ಸಲ ವಿಶೇಷವಾಗಿ ಕೃಷಿಗೆ ಪ್ರತ್ಯೇಕವಾಗಿ ಬಜೆಟ್‌ನ್ನು ಮಂಡಿಸಿದ್ದಾರೆ. ಬಹುಶ: ದೇಶದಲ್ಲಿ ಮೊಟ್ಟ ಮೊದಲಿಗೆ ಕೃಷಿ ಬಜೆಟ್‌ನ್ನು ಮಂಡಿಸಿರತಕ್ಕಂಥ ಹೆಗ್ಗಳಿಕೆ ನಿಮಗೂ ಇದೆ ಹಾಗೂ ನಮಗೂ ಇದೆ. ಇದುವರೆವಿಗೂ ಯಾವ ರಾಜ್ಯದಲ್ಲೂ ಕೂಡ ಕೃಷಿಗೆ ಪ್ರತ್ಯೇಕವಾಗಿ ಬಜೆಟ್‌ನ್ನು ಮಂಡಿಸಿರಲಿಲ್ಲ. ಕೇಂದ್ರದಲ್ಲಿ ಮಾತ್ರ ಒಂದು ಸಾಮಾನ್ಯ ಬಜೆಟ್ ಮತ್ತೊಂದು ರೈಲ್ವೇ ಬಜೆಟ್ ಎರಡನ್ನು ಮಂಡಿಸುತ್ತಾರೆ. ತಮಗೆಲ್ಲಾ ಗೊತ್ತಿರುವಂತೆ ರೈಲ್ವೇಯದು ಬಹಳ ನೆಟ್‌ವರ್ಕ್ ಇದೆ. ಮತ್ತೆ ಅಲ್ಲಿ ಬಹಳ ದೊಡ್ಡ ದೊಡ್ಡ ಯೋಜನೆಗಳಿದ್ದು ಒಂದೊಂದು ಯೋಜನೆಗೂ ಸಾವಿರಾರು ಕೋಟಿ ರೂಪಾಯಿಗಳು ಬೇಕಾಗುತ್ತದೆ. ಸರಕು, ಸಾಗಾಣಿಕೆ, ಪ್ರಯಾಣಿಕರದು, ಹೀಗೆ ಬಹಳ ದೊಡ್ಡ ಇಲಾಖೆಯಾಗಿರುವುದರಿಂದ ಬಹಳ ಹಿಂದಿನಿಂದಲೂ ಕೂಡ ಇದಕ್ಕೆ ಪ್ರತ್ಯೇಕವಾಗಿ ಬಜೆಟ್‌ನ್ನು ಮಂಡಿಸುತ್ತಾರೆ. ಅಲ್ಲಿ ರೈಲ್ವೇ ಸಚಿವರಾದವರು ರೈಲ್ವೇ ಬಜೆಟ್‌ನ್ನು ಮಂಡಿಸುತ್ತಾರೆ. ಹಣಕಾಸಿನ ಸಚಿವರಾದವರು ಸಾಮಾನ್ಯ ಬಜೆಟ್‌ನ್ನು ಮಂಡಿಸುತ್ತಾರೆ. ಇಲ್ಲಿಯ ವಿಶೇಷ ಏನೆಂದರೆ, ಹಣಕಾಸಿನ ಸಚಿವರಾದ ಮಾನ್ಯ ಮುಖ್ಯಮಂತ್ರಿಗಳು ಎರಡೂ